# ಮನ್ನಾ ಗೌಡನ ಮರೆಳ ಕಂಟ ಹಾಗೂ ಹೊಳೆಗದ್ದೆಯ ಹೆದ್ದಾರಿ ಸುಂಕ

## ಕೃಷಿ ಕರಗುವ ಕ್ಷಣ ಮತ್ತು ಇತರ ಕಥೆಗಳು



■ ಶಿವಾನಂದ ಕಳವೆ

**ಊರು ಮುರಿದು ಕಟ್ಟುವ ಅಭಿವೃದ್ಧಿಯಲ್ಲಿ ಸುಧಾರಣೆಗಿಂತ ಬದಲಾವಣೆಯಾಗುತ್ತಿದೆ, ನೆಲದ ಕೌಶಲಗಳೆಲ್ಲ ಮಾಯವಾಗುತ್ತಿವೆ. 'ಸ್ಕಿಲ್ ಇಂಡಿಯಾ' ಹಾದಿ ತಪ್ಪಿದೆ, ಸಂಗ್ರಾಮದ ಹೊಡೆತಕ್ಕೆ ಗ್ರಾಮಭಾರತ ಸಾಯುತ್ತಿದೆ. 'ದಾರಿ ತಪ್ಪಿದ್ದು ನಾನಲ್ಲ ನೀವು' ಎಂದು ಹುಚ್ಚುಕೋಡಿ ಬಡಗಣೆ ಹಳ್ಳ ನುಡಿಯುತ್ತಿದೆ. ಅಭಿವೃದ್ಧಿ ಚಕ್ರದ ವೇಗದಲ್ಲಿ ಎಂಥ ಅಪಘಾತವಾಗಿದೆ? ಎಂದೂ ಮರೆಯಲಾಗದ ಒಂದು ಹಳ್ಳಿ ಹಾಗೂ ಹಳ್ಳದ ಶತಮಾನದ ಮೆಲುಕು ಇಲ್ಲಿದೆ.**

ಮುಂಗಾರು ಮಳೆಯ ಸೊಕ್ಕಿನಲ್ಲಿ ಪ್ರತಿ ವರ್ಷ ಹರಿವಿನ ದಿಕ್ಕು ಬದಲಿಸುತ್ತಿದ್ದ ಹಳ್ಳ ಬಡಗಣೆ. ಉತ್ತರ ಕನ್ನಡದ ಧಾರೇಶ್ವರಕ್ಕಿಂತ ತುಸು ಮುಂದಿನ ಬಡಗಣೆಗೂ ಅರಬ್ಬೀ ಸಮುದ್ರಕ್ಕೂ ಹಳೆಯ ತಕರಾರು. ಮಳೆಗಾಲದಲ್ಲಿ ಎಷ್ಟೇ ಆರ್ಭಟಿಸಿ ಬಂದರೂ ಸಾಗರದ ಅಬ್ಬರದ ತೆರೆಯ ಹೊಡೆತಕ್ಕೆ ಗದ್ದೆ ಬಯಲಲ್ಲಿ ಹಳ್ಳದ ನೀರು ಒಬ್ಬು ನಿಲ್ಲಬೇಕು. ಮಣ್ಣುಮೆತ್ತಿ, ಕಸ ಹೊತ್ತು ಬಂದವಳನ್ನು ತನ್ನೊಡಲಿಗೆ ಕಡಲು ತಕ್ಷಣ ಸೇರಿಸಿಕೊಳ್ಳುವವಳಲ್ಲ. ಸೇರಲಾಗದೇ ಸೋತು ನಿಂತ ನೀರು ಮರಳು ತೊಳೆಯುತ್ತ, ಗದ್ದೆ ಮುಳುಗಿಸುತ್ತ, ನೆಲ ಕೊರೆಯುತ್ತ ಸುತ್ತೆಲ್ಲ ಕಡೆಯೂ ಹುಚ್ಚು ಹೊಳೆ. ಗದ್ದೆ ತುಂಬ ನೀರು ನಿಂತಿದ್ದಕ್ಕೆ ಹೊಳೆಗದ್ದೆಯಾಗಿ, ಫಲವತ್ತಾದ ಘಟ್ಟದ ಮಣ್ಣು ಗದ್ದೆಗೆ ಬಿದ್ದು ಬಂಗಾರದ ಭತ್ತದ ಬೆಳೆ ಬಂದಿದ್ದಕ್ಕೆ ಸುವರ್ಣಗದ್ದೆಯಾಗಿ ಹಳ್ಳದ ಪಕ್ಕದ ಭೂಮಿಗೆ ಹೆಸರು ದೊರಕಿದೆ.

ನದಿ ಸಾಗರದ ಗಲಾಟೆಯಲ್ಲಿ ಕೆಲವು ಕೃಷಿ ಭೂಮಿಗಳು ಸಮುದ್ರದ ವಶವಾಗಿ ಕಂದಾಯ ಕೊಡುವ ಕೃಷಿಕರಿಗೆ ಉಳಿದದ್ದು ಭೂದಾಖಲೆ ಮಾತ್ರ. 'ಷಾವುಕೆ ಅವ್ನ್ ತಕಂಡಿ ಎಂಥ ಮಾಡ್ತೆ? ಬದುಕೂಕೆ ದಿಕ್ ಇಲ್ದ ಬಡಗಣೆಯಂಥವ' ಎಂದು ಹಾಲಕ್ಕಿ ಕೊಪ್ಪದವರು ನಂಬಲು ಅರ್ಹರಲ್ಲದವರನ್ನು ದಿಕ್ಕೆಟ್ಟು ಹರಿವ ಬಡಗಣೆ ಹೊಳೆಗೆ ಹೋಲಿಸಿ ಬೈದದ್ದಿದೆ. ಕೃಷಿಕರಿಗಷ್ಟೇ ಅಲ್ಲ, ಗಡಿ ಜಟಕೇಶ್ವರ, ಮಾಸ್ತಿ, ಬೀರ್ಲು, ಭೂತ, ನಾಗ, ಬೊಮ್ಮಯ್ಯ, ನಾಗಮಾಸ್ತಿಯೆಂದು ಹೊಳೆ ದಡದ ದೇವರುಗಳಿಗೂ ಹಳ್ಳದ ಭಯ. ಈ ವರ್ಷ ಗಡಿಪೂಜೆ ಸಲ್ಲಿಸಿದ ದೈವ ನೆಲೆ ಮುಂದಿನ ವರ್ಷಕ್ಕೆ ಹೊಳೆ ಪಾಲಾಗಬಹುದು. ನಾಲ್ಕು ಮುಂಡಿಗೆ ದಂಟು, ಲಕ್ಕಿ ಕಡ್ಡಿ ಊರಿ ಪ್ರವಾಹದಲ್ಲಿ ಹೇಗಾದರೂ ದೇವರ ಕಟ್ಟೆಯ ಮಣ್ಣು ಉಳಿಸಿ ಪರಂಪರೆಯನ್ನು ಪ್ರವಾಹದ ವಿರುದ್ಧ ಬದುಕಿಸಿದ್ದು ದೊಡ್ಡ ಸಾಹಸ.

### ಹಂದಿಕಂಡ ಗ್ರಾಮ ಹಳದಿಪುರ

ಬಡಗಣೆ ದಾಟಿದ ಮೇಲೆ ಸಿಗುವ ಊರು ಹೊನ್ನಾವರದ ಹಳದಿಪುರ. ಹಳೆಯ ಕಡತ ಬಿಚ್ಚಿದರೆ 17ನೇ ಶತಮಾನದ ಹಳೆಯ ಭೂ ದಾಖಲೆಗಳಲ್ಲಿ 'ಹಂದಿಕಂಡ' ಗ್ರಾಮವಿದು. ಕರಾವಳಿ ಮೈಸೂರು ರಾಜ್ಯದ ಆಡಳಿತದ ಆಳ್ವಿಕೆಗೆ ಬಂದಾಗ ಟಿಪ್ಪೂನಿಗೆ ಹಂದಿ ಕಂಡರಾಗದೆಂದು ಗ್ರಾಮದ ಹೆಸರು ಬದಲಿಸಿ ಅಲ್ಲಿಂದ ಹಳದಿಪುರವೆಂದು ಹೆಸರಾಯ್ತು. ಕ್ರಿ.ಶ. 1801ರ ಫೆಬ್ರುವರಿ 22, 23ರಂದು ಪ್ರವಾಸಿ